ಶ್ರೀ ಎನ್. ಜಿ. ನರಸಿಂಹೇಗೌಡ.—ಇತರ್ಯ ನಿರ್ಮೂಲ ಮಾಡುವ ಕಾರ್ಯದಲ್ಲಿ ಹಾನನ ಜಿಲ್ಲೆಯಲ್ಲಿ ಕಾಂಗ್ರೆಸ್ಸಿಗರು ಮತ ತೆಗೆದುಕೊಂಡು ಅಧಿಕಾರ ದುರುಪಯೋಗ ಮಾಡಿ ಕೊಂಡಿದ್ದು ಸರಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಸ್. ರುದ್ರಪ್ಪ.—ನನ್ನ ಗಮನಕ್ಕೆ ಬಂದಿಲ್ಲ. ಮಾನ್ಯ ಸದಸ್ಯರು ನನ್ನ ಗಮನಕ್ಕೆ ಸಹ ತಂದಿಲ್ಲ.

ಶ್ರೀ ಎನ್. ಜಿ. ನರಸಿಂಹೇಗಾಡ.—ಈ ಸಭೆಯಲ್ಲಿ ಅನೇಕಸಾರಿ ಹೇಳಿದ್ದೇನೆ. ಆದರೂ ಸಹ ಕ್ರಮ ತೆಗೆದುಕೊಂಡಿಲ್ಲ.

ಅಧ್ಯಕ್ಷರು.—ಚುನಾವಣೆ ಹತ್ತಿರ ಬಂದಿವೆ; ಗೊತ್ತಾಗುತ್ತದೆ.

10-00 A.M.

Sri J. B. MALLARADHYA.—To what period does this answer relate? It is not as if the working plan for Shimoga district for the forest department is new. That was there for quite a long time. The House cannot take that answer so easily.

Sri H. S. RUDRAPPA.—Sir, the development work is undertaken by the regular forest division, but the working plan division has been constituted only to prepare a map for the afforestation, exploitation and cultural operation.

ಶ್ರಿ ಎ. ಎಸ್. ದುದ್ಯಾನಾಯಕ್.—ಸರ್ಕಾರದಲ್ಲಿ ಬಡ ಬೋರೇಗೌಡನ ಹಣ ಜಾಸ್ತಿ ಯಾಗಿದೆ ಎಂತ ಹೇಳಿ ಈ ತರಹ ವರ್ಕಿಂಗ್ ಪ್ಲಾನುಗಳನ್ನು ಹಾಕಿಕೊಂಡಿದ್ದಾರೋ?

(ಉತ್ತರವಿಲ್ಲ)

ಶ್ರೀ ಡಿ. ಮೂಕಪ್ಪ.—ಈ ವರ್ಕಿಂಗ್ ಪ್ಲಾನಿನಲ್ಲಿ ಅರಣ್ಯಾಧಿಕಾರಿಗಳು ವನವಿಹಾರ ಮಾಡುತ್ತಿದ್ದಾರೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಸ್. ರುದ್ರಪ್ಪ.—ಇಲ್ಲ.

COMPLETION OF SURVEY AND SETTLEMENT OF THE JODI SHANTHANAPUR VILLAGE OF HOSKOTE TALUK.

*Q.—1088. Sri S. R. RAMAIAH (Hoskote).—

Will the Government be pleased to state:—

(*a*) when the Jodi Shanthanapur village of Hoskote Taluk was taken over by the Government ;

(*b*) when the survey settlement was completed and notification made ;

(*c*) the total extent of the area left to the Jodidar as cultivable land ;

(*d*) whether they are aware that the Ex-Jodidar is selling away the jungle for firewood and also planting the cashewnuts without the permission of the Government ;

(*e*) if so, action taken by the Government in the matter;

(*f*) whether they are aware that the same area is recommended by the Sericulture Department and Social Welfare Department to start Sericulture Farm and Agriculture colony, respectively ?

A.—Sri KADIDAL MANJAPPA (Minister for Revenue).—

(*a*) The village vested in Government on 1st February 1959.

(*b*) The survey and settlement was completed and settlement rates were announced on 29th August 1961.

(*c*) 31 acres 23 guntas.

(*d*) Government are not aware of the Ex-Jodidar selling away the jungle for firewood. No permission was granted to take up plantation of cashewnut. It is however ascertained that cashewnuts have been planted in an area of 10 to 15 acres about three months back and new pits have also been dug over an area of about ten acres for taking up fresh plantations.

(*e*) Necessary instructions have been issued to the local officers to keep a watch over the clandestine removal of fuel and also prevent unauthorised occupation of land.

(*f*) No.

ಶ್ರೀ ಎಸ್. ಆರ್. ರಾಮಯ್ಯ.—ಈ ಜಮೀನನ್ನು ಸಾಗುವಳಿಗೆ ಕೊಟ್ಟು ಎಷ್ಟು ವರ್ಷವಾಯಿತು ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರಿ ಆಜ್ಞೆ ಹೊರಡುವುದಕ್ಕೆ ಮುಂಚೆಯೇ ಆ ಜಮೀನು ಸಾಗುವಳಿಯಲ್ಲಿತ್ತು.

ಶ್ರೀ ಎಸ್. ಆರ್. ರಾಮಯ್ಯ.—ಈ ಬಗ್ಗೆ ಸರ್ಕಾರದವರು ಪಹಣಿ ರೆಕ್ಕೆ ತರಿಸಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನಮಗೆ ಈಗ ಇಲಾಖೆಯವರು ಒದಗಿಸಿರತಕ್ಕ ಉತ್ತರದ ಆಧಾರದ ಮೇಲೆ ಈ ವಿಷಯವನ್ನು ತಿಳಿಸುತ್ತಿದ್ದೇನೆ.

ಶ್ರೀ ಎಸ್. ಆರ್. ರಾಮಯ್ಯ.—ಈ ಜಮೀನು ಅನಾದಿಕಾಲದಿಂದಲೂ ಬಂಜರು ಬಿದ್ದಿತ್ತು ಎಂಬ ವಿಚಾರ ಸರ್ಕಾರದವರಿಗೆ ತಿಳಿದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಈ ವಿಚಾರ ಇನಾಂ ಅಬಾಲಿಷ್ ಡೆಪ್ಯುಟಿ ಕಮಿಷನರು ನೋಡಿ ಮಾಡಬೇಕಾದ ಕೆಲಸ.

ಶ್ರೀ ಎಸ್. ಆರ್. ರಾಮಯ್ಯ.—ಅಲ್ಲಿ ಜೋಡೀದಾರರು ಮರಗಳನ್ನು ಕಡಿಯುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು (ಡಿ) ನಲ್ಲಿ ಉತ್ತರ ಕೊಟ್ಟಿದ್ದಾರೆ. ಹಾಗೆ ಮರಗಳನ್ನು ಕಡಿಯದೆ ಇದ್ದಿದ್ದರೆ ಅಲ್ಲಿ ಬೆಳೆ ಇಡಲು ಹೇಗೆ ಸಾಧ್ಯವಾಯಿತು ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಅವರನ್ನು ಆ ಸ್ಥಳದಿಂದ ಉಚ್ಚಾಟನೆ ಮಾಡಬೇಕೆಂತ ಆರ್ಡರ್ ಮಾಡಿದ್ದೇವೆ.

ಶ್ರೀ ಎಸ್. ಆರ್. ರಾಮಯ್ಯ.—ಅಲ್ಲೀಗ ಅಕ್ರಮವಾಗಿ ಅವರು ಗೋಡಂಬಿ ಮರಗಳನ್ನು ಬೆಳೆಸುತ್ತಿರುವುದರಿಂದ ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನು ?

ಅಧ್ಯಕ್ಷರು.—ಅವರನ್ನು ಆ ಸ್ಥಳದಿಂದ ಉಚ್ಚಾಟನೆ ಮಾಡಲು ಕ್ರಮ ತೆಗೆದು ಕೊಂಡಿದ್ದೇವೆಂದು ಸರ್ಕಾರದವರು ಉತ್ತರ ಕೊಟ್ಟಮೇಲೆ ಮಾನ್ಯನದಸ್ಯರಿಗೆ ಮತ್ತೇನುಬೇಕಾಗಿದೆ ?

ಶ್ರೀ ಎಸ್. ಆರ್. ರಾಮಯ್ಯ.—ಈಗ ಕಳ್ಳತನದಲ್ಲಿ ಅವರು ಸೌದೆ ಕಡಿದು ಸಾಗಿಸುತ್ತಿರುವಾಗ ಅವರಿಂದ ಆ ಹಣ ವಸೂಲ್ ಮಾಡಲು ಸರ್ಕಾರದವರೇನು ಕಾರ್ಯಕ್ರಮ ತೆಗೆದು ಕೊಂಡಿದ್ದಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿಚಾರ ನಮ್ಮ ಗಮನಕ್ಕೇ ಬಂದಿಲ್ಲವೆಂದು ನಾನಾಗಲೆ ಉತ್ತರ ಕೊಟ್ಟಿದ್ದೇನೆ.